# ರಾಜ್ಯ ಒಕ್ಕಲಿಗರ ಸಂಘ

ನಂ 148, "ನಾಡಪ್ರಭು ಕೆಂಪೇಗೌಡ ಭವನ", ಕೃಷ್ಣರಾಜೇಂದ್ರ ರಸ್ತೆ, ವಿಶ್ವೇಶ್ವರಪುರ, ಬೆಂಗಳೂರು – 560 004

ಸಂಖ್ಯೆ.ರಾಒಸ/ಆಡಳಿತ/ 598 /2025–26

ದಿನಾಂಕ: 8/7/25

ಗೆ,

ಸಂಪಾದಕರು,

______________________________

ಬೆಂಗಳೂರು.

## ಪ್ರಕಟಣೆಯ ಕೃಪೆಗಾಗಿ

ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ ಒಕ್ಕಲಿಗರ ಜನಾಂಗದ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ 2024–25ನೇ ಸಾಲಿನಲ್ಲಿ ಸರ್ಕಾರಿ ಶಾಲೆ/ಕಾಲೇಜುಗಳಲ್ಲಿ ವಿದ್ಯಾಭ್ಯಾಸ ನಡೆಸಿ ಎಸ್.ಎಸ್.ಎಲ್.ಸಿ/ಪಿ.ಯು.ಸಿಯಲ್ಲಿ ಶೇಕಡಾ 95% ಕ್ಕಿಂತ ಹೆಚ್ಚು ಅಂಕಗಳಿಸಿರುವವರು ಹಾಗೂ ಸರ್ಕಾರೇತರ ಶಾಲೆ/ಕಾಲೇಜುಗಳಲ್ಲಿ ವಿದ್ಯಾಭ್ಯಾಸ ನಡೆಸಿ ಎಸ್.ಎಸ್.ಎಲ್.ಸಿ/ಪಿ.ಯು.ಸಿಯಲ್ಲಿ ಶೇಕಡಾ 95% ಕ್ಕಿಂತ ಹೆಚ್ಚು ಅಂಕಗಳಿಸಿರುವವರಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಸ್ವ–ವಿವರ(ಹೆಸರು, ತಂದೆ/ತಾಯಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ವಿದ್ಯಾಭ್ಯಾಸ ಮಾಡಿದ ಶಾಲೆ/ಕಾಲೇಜಿನ ಹೆಸರು, ಎಸ್.ಎಸ್.ಎಲ್.ಸಿ/ಪಿ.ಯು.ಸಿ ಅಂಕಪಟ್ಟಿಯ ದೃಢೀಕೃತ ನಕಲು ಪ್ರತಿಗಳು ಮತ್ತು ಒಕ್ಕಲಿಗ ಜನಾಂಗಕ್ಕೆ ಸೇರಿದ್ದಾರೆ ಎಂಬುದಕ್ಕೆ ವಿದ್ಯಾರ್ಥಿಯ ಜಾತಿ ಪ್ರಮಾಣ ಪತ್ರ/ಸಂಘದ ಗುರುತಿನ ಚೀಟಿಯ ದೃಢೀಕೃತ ನಕಲು ಪ್ರತಿ ಹಾಗೂ ಬ್ಯಾಂಕ್ ಖಾತೆಯ ವಿವರ) ಗಳನ್ನೊಳಗೊಂಡ ಅರ್ಜಿಯನ್ನು ಭರ್ತಿ ಮಾಡಿ ಪ್ರತಿಭಾ ಪುರಸ್ಕಾರ ವಿಭಾಗ, ನಾಡಪ್ರಭು ಕೆಂಪೇಗೌಡ ಭವನ, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್.ರಸ್ತೆ, ವಿ.ವಿ.ಪುರ, ಬೆಂಗಳೂರು–04 ವಿಳಾಸಕ್ಕೆ ದಿನಾಂಕ: 10.07.25 ರಿಂದ ದಿನಾಂಕ: 25.07.25 ರ(ಕಛೇರಿ ವೇಳೆಯಲ್ಲಿ) ಒಳಗಾಗಿ ಸಲ್ಲಿಸಿ, ಸ್ವೀಕೃತಿ ಪಡೆದುಕೊಳ್ಳತಕ್ಕದ್ದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ನಿಗದಿಗೊಳಿಸಿರುವುದರಿಂದ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಹಾಗೂ ಅಪೂರ್ಣವಾದ ಮಾಹಿತಿ ನೀಡಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಪ್ರತಿಭಾ ಪುರಸ್ಕಾರದ ಅರ್ಜಿಗಳನ್ನು ಸಂಘದ ಕೇಂದ್ರ ಕಛೇರಿಯ ಪ್ರತಿಭಾ ಪುರಸ್ಕಾರ ವಿಭಾಗದಲ್ಲಿ ಪಡೆದುಕೊಳ್ಳಬಹುದು ಹಾಗೂ ರಾಜ್ಯ ಒಕ್ಕಲಿಗರ ಸಂಘದ ವೆಬ್‌ಸೈಟ್ rvsangha.org ನಲ್ಲಿಯೂ ಸಹ ಪಡೆಯಬಹುದು.

ಪ್ರತಿಭಾ ಪುರಸ್ಕಾರದ ಅರ್ಜಿಗಳನ್ನು ಪರಮಾರ್ಶಿಸಿ ಅರ್ಹ ಅಭ್ಯರ್ಥಿಗಳನ್ನು ರಾಜ್ಯ ಒಕ್ಕಲಿಗರ ಸಂಘದ ವೆಬ್‌ಸೈಟ್ rvsangha.orgನಲ್ಲಿ ಪ್ರಕಟಿಸಲಾಗುವುದು. ಪ್ರತಿಭಾ ಪುರಸ್ಕಾರದ ಕಾರ್ಯಕ್ರಮದ ದಿನಾಂಕ ಮತ್ತು ಸ್ಥಳವನ್ನು ಮುಂದಿನ ದಿನಗಳಂದು ತಿಳಿಸಲಾಗುವುದು.

ಈ ಬಾರಿ ಒಕ್ಕಲಿಗ ಜನಾಂಗದ ಕಡುಬಡ ಕುಟುಂಬದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಉತ್ತೇಜನಕ್ಕಾಗಿ ಅನುವು ಮಾಡಿಕೊಟ್ಟಿರುವುದು ವಿಶೇಷವಾಗಿರುತ್ತದೆ. ಒಕ್ಕಲಿಗ ಜನಾಂಗದ ಅಭಿವೃದ್ಧಿಯೇ ನಮ್ಮ ಆಡಳಿತ ಮಂಡಳಿಯ ಧ್ಯೇಯೋದ್ದೇಶವಾಗಿರುತ್ತದೆ. ರಾಜ್ಯ ಒಕ್ಕಲಿಗರ ಸಂಘದ ಹೆಸರನ್ನು ಇಮ್ಮಡಿಗೊಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ.

(ಟಿ. ಕೋನಪ್ಪರೆಡ್ಡಿ)
ಪ್ರಧಾನ ಕಾರ್ಯದರ್ಶಿ

# ರಾಜ್ಯ ಒಕ್ಕಲಿಗರ ಸಂಘ

# 148, ನಾಡಪ್ರಭು ಕೆಂಪೇಗೌಡ ಭವನ, ವಿಶ್ವೇಶ್ವರಪುರ, ಕೃಷ್ಣರಾಜೇಂದ್ರರಸ್ತೆ, ಬೆಂಗಳೂರು–560004

## 2024-25 ನೇ ಸಾಲಿನ ಎಸ್.ಎಸ್.ಎಲ್.ಸಿ/ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ಅರ್ಜಿ ನಮೂನೆ

| ಕ್ರ.ಸಂ | ವಿವರಗಳು | | |
|---|---|---|---|
| 1 | ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು | | |
| 2 | ತಂದೆ/ತಾಯಿ/ಪೋಷಕರ ಹೆಸರು | | |
| 3 | ಖಾಯಂ ವಿಳಾಸ ಮತ್ತು<br>ದುರವಾಣಿ/ಮೊಬೈಲ್ ಸಂಖ್ಯೆ | | |
| 4 | ಜಿಲ್ಲೆಯ ಹೆಸರು | | |
| 5 | 2024–25 ನೇ ಸಾಲಿನಲ್ಲಿ ವ್ಯಾಸಂಗ ಮಾಡಿದ ಶಾಲೆ–ಕಾಲೇಜಿನ ಹೆಸರು, ವಿಳಾಸ ಮತ್ತು ತೇರ್ಗಡೆಯಾದ ತರಗತಿ | | |
| 6 | ತೇರ್ಗಡೆಯಾದ ತರಗತಿಯಲ್ಲಿ<br>(ಅ) ನಿಗಧಿಪಡಿಸಿದ ಒಟ್ಟು ಅಂಕಗಳು<br>(ಆ) ವಿದ್ಯಾರ್ಥಿಯು ಪಡೆದ ಅಂಕಗಳು<br>(ಇ) ಶೇಕಡಾವಾರು ಅಂಕಗಳು<br>(ಅಂಕಪಟ್ಟಿ ಲಗತ್ತಿಸಬೇಕು) | | |
| 7 | ಒಕ್ಕಲಿಗರ ಜನಾಂಗಕ್ಕೆ ಸೇರಿರುವುದಕ್ಕೆ ಸೂಕ್ತ ದಾಖಲಾತಿಯನ್ನು ಲಗತ್ತಿಸುವುದು | | |
| 8 | ವಿದ್ಯಾರ್ಥಿಯ ಬ್ಯಾಂಕ್ ಖಾತೆಯ ವಿವರ<br>(ಪಾಸ್‌ಬುಕ್‌ನ ಪ್ರತಿಯನ್ನು ಲಗತ್ತಿಸಬೇಕು) | | ಬ್ಯಾಂಕ್ ಖಾತೆ ಸಂಖ್ಯೆ:<br><br>ಬ್ಯಾಂಕಿನ ಐಎಫ್‌ಎಸ್‌ಸಿ ಕೋಡ್ |

ಮೇಲೆ ತಿಳಿಸಿದ ವಿವರಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ ಹಾಗು ಸೂಕ್ತ ದಾಖಲಾತಿಗಳನ್ನು ಲಗತ್ತಿಸಿರುತ್ತೇನೆ.

ದಿನಾಂಕ:

ಸ್ಥಳ: ತಂದೆ/ತಾಯಿ/ಪೋಷಕರ ಸಹಿ ವಿದ್ಯಾರ್ಥಿಯ ಸಹಿ

**(ವಿಶೇಷ ಸೂಚನೆ: 2024–25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ/ಪಿ.ಯು.ಸಿ ಯಲ್ಲಿ ಶೇ.95 ಮತ್ತು ಅದಕ್ಕಿಂತ ಹೆಚ್ಚು ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು)**

## ಕಛೇರಿ ಉಪಯೋಗಕ್ಕಾಗಿ

ಸ್ವೀಕರಿಸಲಾದ ಅರ್ಜಿಯು ನಿಗಧಿಪಡಿಸಿದ ದಿನಾಂಕದಂದು ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿರುವುದರಿಂದ ವಿದ್ಯಾರ್ಥಿಗೆ ಪ್ರತಿಭಾ ಪುರಸ್ಕಾರ ನೀಡಲು ಶಿಫಾರಸ್ಸು ಮಾಡಬಹುದು.

ಸ್ವೀಕರಿಸಲಾದ ಅರ್ಜಿಯು________________________________________ ಕಾರಣಗಳಿಂದ ತಿರಸ್ಕೃತಗೊಂಡಿದೆ.

ವಿಷಯ ನಿರ್ವಾಹಕರು ಸಹಾಯಕ ಆಡಳಿತಾಧಿಕಾರಿ